# ಮದಗ ಮರೆತು ಸೋತ ಉಡುಪಿ



ಹಿತ್ತಲಗಿಡ ಮದ್ದಲ್ಲ ಎನ್ನುವಂತೆ, 'ಹಿತ್ತಲ ಮದಗವೂ ನೀರಲ್ಲ' ಎಂದು ನಿರ್ಲಕ್ಷಿಸಿದ್ದರ ಫಲವೇ ಉಡುಪಿ ಜಿಲ್ಲೆಯಲ್ಲಿನ ಮದಗಗಳು ತೆರೆಮರೆಗೆ ಸರಿದಿವೆ. ಅಂತರ್ಜಲದ ವೃದ್ಧಿಗೆ, ಕೃಷಿ ಚಟುವಟಿಕೆಗಳಿಗೆ ನೀರು ಒದಗಿಸುತ್ತಿದ್ದ ಮದಗಗಳು ಹೊಸ ತಲೆಮಾರಿನ ಜನರಿಗೆ ಗೊತ್ತೇ ಇಲ್ಲ. ಹೀಗೇನಿದ್ದರೂ, ನೀರಿನ ಕೊರತೆ ಎದುರಾಯಿತೆಂದರೆ, ಟ್ಯಾಂಕರ್‌ಗೆ ಫೋನ್ ಮಾಡುವ ಎನ್ನುವ ಪರಿಸ್ಥಿತಿ. ಈಗಲೂ ಉಡುಪಿ ಪರಿಸರದಲ್ಲಿನ ಮದಗಗಳನ್ನು ಗುರ್ತಿಸಿ ಪುನರುಜ್ಜೀವನಗೊಳಿಸಿದರೆ, ಜಿಲ್ಲೆ ಜಲ ಸ್ವಾವಲಂಬಿಯಾಗುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಿಟ್ಟಂತಾಗುವುದು.

■ ಶ್ರೀ ಪಡ್ರೆ

ಮಣಿಪಾಲ ಬಸ್ ನಿಲ್ದಾಣದಿಂದ ಮಣ್ಣಪಳ್ಳಕ್ಕೆ ಒಂದೇ ಕಿಲೋಮೀಟರ್. ನಡೆಯುವಿರಾದರೆ, ಅದರರ್ಧ ದೂರದ 'ಶಾರ್ಟ್ ಕಟ್ಟೂ' ಇದೆ. ಈ ಸುಂದರ ಪಟ್ಟಣದ ಜಲನಿಧಿಯೇ ಮಣ್ಣಪಳ್ಳ.

ಅರುವತ್ತು ಎಕ್ರೆ ಆವರಿಸುವ ಇಷ್ಟು ದೊಡ್ಡ ಜಲಾಶಯ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೇರೆಲ್ಲೂ ಇಲ್ಲ. ಈ ಜಲಪಾತ್ರೆಯೇ ಮಣಿಪಾಲಕ್ಕೆ ಆ ಹೆಸರು ತಂದಿದೆ.

ಮಣಿಪಾಲ ಪಟ್ಟಣ ದೇಶಕ್ಕೇ ಗೊತ್ತು. ಆದರೆ ಮಣ್ಣಪಳ್ಳ ಗೊತ್ತಿರುವವರು ಕಡಿಮೆ. ಮಳೆ ಬಂದಾಗ, ಕೋಟಿಗಟ್ಟಲೆ ಲೀಟರ್ ಮಳೆನೀರನ್ನು ಈ ಜಲಾಶಯ ತನ್ನೊಡಲಿನಲ್ಲಿ ತುಂಬಿಕೊಳ್ಳುತ್ತದೆ. ಕ್ರಮೇಣ ಅದನ್ನು ಇಂಗಿಸಿಕೊಡುತ್ತದೆ. ಮುಂದಿನ ಬಾರಿ ಮಣಿಪಾಲಕ್ಕೆ ಹೋದಾಗ, ಆ ಪೇಟೆಯ ನೀರನೆಮ್ಮದಿಯ ದೇಗುಲವಾದ ಮಣ್ಣಪಳ್ಳ ನೋಡದೆ ಮರಳದಿರಿ.

### ಕರಾವಳಿಯ ಪಾರಂಜವ್ಯ

ಮಣ್ಣಪಳ್ಳ ಕೆರೆಯಲ್ಲ; ಮದಗ. ಮಂಗಳೂರು–ಕಾಸರಗೋಡುಗಳಲ್ಲಿ ಇದನ್ನು ಮದಕ ಎನ್ನುತ್ತಾರೆ. ಮದಗ ಕರಾವಳಿ ಜಿಲ್ಲೆಗಳ ವಿಶಿಷ್ಟ ಪಾರಂಜವ್ಯಗಳಲ್ಲೊಂದು. ಪಾರಂಜವ್ಯ ಎಂದರೆ ಪಾರಂಪರಿಕ ಜಲ ಸಂರಕ್ಷಣಾ ವ್ಯವಸ್ಥೆ.

'ಈ ಶತಮಾನದ ಆದಿಯಲ್ಲಿ ಮಣ್ಣಪಳ್ಳ ಹೀಗಿರಲಿಲ್ಲ. ಅತಿ ದುರ್ಗತಿಯಲ್ಲಿತ್ತು. ಅದಕ್ಕೆ ಕಾಯಕಲ್ಪ ಕೊಡುವ ಕೆಲಸ ಶುರುವಾದದ್ದು 2005ರಲ್ಲಿ. ಆಗ ಅಲ್ಲಲ್ಲಿ ಹೊಂಡ ಇತ್ತು. ಮದಗ ಈಗ ಇರುವಷ್ಟು ದೊಡ್ಡದೂ ಇರಲಿಲ್ಲ. ಅಂದಾಜು 20 ಎಕರೆ ಇದ್ದಿರಬಹುದು. ನಾನೂರರಷ್ಟು ವಲಸೆ ಕಾರ್ಮಿಕರ ಗುಡಿಸಲುಗಳಿದ್ದುವು. ಪ್ರಭಾವಿ ವ್ಯಕ್ತಿಗಳ ಅತಿಕ್ರಮಣಕ್ಕೂ ಗುರಿಯಾಗಿತ್ತು', ಎಂದು ಮಣ್ಣಪಳ್ಳದ ಪುನರುಜ್ಜೀವನಕ್ಕೆ ಹೆಗಲು ಕೊಟ್ಟ ಮಣಿಪಾಲದ 'ನಿರ್ಮಿತಿ' ಕೇಂದ್ರದ ಯೋಜನಾ ನಿರ್ದೇಶಕ ಅರುಣ್ ಕುಮಾರ್ ತಿಳಿಸುತ್ತಾರೆ.

ವಿವಿಧ ಸರಕಾರಿ ಮೂಲಗಳಿಂದ ಬಂದ ಎರಡು ಕೋಟಿ ರೂ. ವೆಚ್ಚ, ಅತಿಕ್ರಮಣ ತೆರವು, ಹತ್ತುಸಾವಿರ ಘನ ಮೀಟರ್ ಹೂಳು ಸಾಗಣೆ ಮತ್ತು ದಶಕದ ಹಂತಹಂತದ ಪುನರುಜ್ಜೀವನ ಚಟುವಟಿಕೆಗಳ ನಂತರ, ಮಣ್ಣಪಳ್ಳ ಈಗ ಈ ವಿದ್ಯಾನಗರಿಯ ಮುಖ್ಯ ಆಕರ್ಷಣೆಯಾಗಿದೆ.

ಹೂಳು ಕಳೆದುಕೊಂಡ ಮದಗದ ಈಗಿನ ನೀರ ಮಟ್ಟ ಕನಿಷ್ಠ 12 ಅಡಿ. ಮಧ್ಯಮ ಮಟ್ಟದಲ್ಲಿ 15 ಮತ್ತು ಗರಿಷ್ಠ ಆಳ ಇರುವಲ್ಲಿ 25 ಅಡಿ. ಸುತ್ತಲೂ ಬೇಲಿ, ಒಂದೂಮುಕ್ಕಾಲು ಕಿಲೋಮೀಟರ್ ಉದ್ದದ ನಡೆ ದಾರಿ, ಆವರಣದೊಳಗೇನೇ ನಿರ್ಮಿತಿ ಕೇಂದ್ರದ ಕಚೇರಿ. ಇದರಿಂದಾಗಿ ಮಣ್ಣಪಳ್ಳಕ್ಕೆ ಕಣ್ಗಾವಲಿನ ರಕ್ಷಣೆ ಸಿಕ್ಕಿದೆ. ಘಟ್ಟಘಟ್ಟವಾಗಿ ನೆಟ್ಟ 12 ಸಾವಿರ ಗಿಡಗಳು ಹಸಿರು ಆವರಣ ರೂಪಿಸಿವೆ.

ಹೆಚ್ಚುಕಮ್ಮಿ ಎರಡು ಕಿಲೋಮೀಟರ್ ದೂರದಲ್ಲಿ, ಮಣಿಪಾಲದ ತಪ್ಪಲಿನಲ್ಲಿದೆ ಇಂದ್ರಾಳಿ. ಅಲ್ಲಿಯವರೆಗೂ ಮಣ್ಣಪಳ್ಳದ ಓವರ್‌ಫ್ಲೋ ನೀರು ಹೋಗುತ್ತದೆ. ಎರಡನೇ ಬೆಳೆ ಭತ್ತದ ಕೃಷಿಗೆ ಈ ನೀರನ್ನು ಕಟ್ಟ ಕಟ್ಟಿ ಸಂಗ್ರಹಿಸಿ ಬಳಸುತ್ತಾರೆ.

ಮರುಜೀವ ತಳೆದ ಮಣ್ಣುಪಳ್ಳ ಮಣಿಪಾಲ ಪೇಟೆಗೆ ಇಳಿಸಿದ ಜಲವಿಮೆ. ಸುತ್ತಲಿನ ಬಹುದೊಡ್ಡ ಪ್ರದೇಶದ ಜಲಮಟ್ಟ ಈಗ ಏರಿದೆ. ಆದರೆ, ಮಣ್ಣುಪಳ್ಳದಿಂದಾಗಿ ಆಗಿರುವ ಅಂತರ್ಜಲ ಮಟ್ಟದ ಏರಿಕೆಯ ಬಗ್ಗೆ 'ಪರಿಣಾಮಗಳ ಅಧ್ಯಯನ' – ಇಂಪ್ಯಾಕ್ಟ್ ಸ್ಟಡಿ – ಆದಂತಿಲ್ಲ.

'ಯೋಜನೆ ಶುರುವಾಗುವ ಹೊತ್ತಿಗೆ ಇಲ್ಲಿನ ಅಗತ್ಯಗಳಿಗಾಗಿ ಕೊಳವೆಬಾವಿ ತೋಡಿಸಿದಾಗ ನೀರು ಸಿಕ್ಕಿದ್ದು 380 ಅಡಿ ಆಳದಲ್ಲಿ' ಎಂದು ನೆನಪಿಸಿಕೊಳ್ಳುವ ಅರುಣ್ ಕುಮಾರ್, 'ಈಗ, ಇಲ್ಲಿ ಸುತ್ತುಮುತ್ತಲಲ್ಲಿ ಕೊಳವೆಬಾವಿಗೆ 150 ಅಡಿಯಲ್ಲಿ ನೀರು ಸಿಗುತ್ತಿದೆ. ಮನೆಗಳ ಬಾವಿ ನೀರು ಹಿಂದಿನಂತೆ ಬತ್ತುವುದಿಲ್ಲ' ಎನ್ನುತ್ತಾರೆ.

ಮಣಿಪಾಲ ಅಂತರರಾಷ್ಟ್ರೀಯ ಮಟ್ಟದ ವಿದ್ಯಾಕೇಂದ್ರ. ಆರೋಗ್ಯ ಕೇಂದ್ರ. ಹಾಗಾಗಿಯೇ ಶಕ್ತಿಕೇಂದ್ರವೂ ಹೌದು. ಉಡುಪಿ ನಗರದಿಂದ ಅನತಿ ದೂರ. ಆಗಾಗ ವಿವಿಐಪಿಗಳು ಸೆಮಿನಾರು, ಪ್ರವಾಸ, ಸುಖವಾಸಗಳಿಗೆ ಭೇಟಿ ಕೊಡುವ